# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 1337 |
| **ಸದಸ್ಯರ ಹೆಸರು** | : | ಶ್ರೀ ಎಂ.ನಾಗರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 21.03.2025 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉತ್ತರ ಕನ್ನಡ ಜಿಲ್ಲೆಯ ಕೇಣಿಯಲ್ಲಿ 30 MTPA ಸಾಮರ್ಥ್ಯದ ಮತ್ತು 4,200 ಕೋಟಿ ರೂ ಅಂದಾಜು ಯೋಜನಾ ವೆಚ್ಚದ ಹೊಸ ಆಳಸಮುದ್ರ ಸರ್ವಋತು ಬಂದರನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಆಯವ್ಯಯದಲ್ಲಿ ಘೋಷಿಸಿದ್ದು, ಸದರಿ ಕಾಮಗಾರಿಯ ಪ್ರಗತಿಯು ಪ್ರಸ್ತುತ ಯಾವ ಹಂತದಲ್ಲಿದೆ; | 2022-23 ನೇ ಸಾಲಿನ ಆಯವ್ಯಯ: ಕಂಡಿಕೆ:253 ರಲ್ಲಿ "ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೇಣಿ - ಬೆಳಿಕೇರಿಯಲ್ಲಿ ಗ್ರೀನ್ ಫೀಲ್ಡ್ ಬಂದರನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಲಾಗಿದೆ.<br><br>ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಕೇಣಿಯಲ್ಲಿ 30 MTPA ಸಾಮರ್ಥ್ಯದ ಬಂದರನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (PPP) ಮಾದರಿಯಲ್ಲಿ ಗ್ರೀನ್ ಫೀಲ್ಡ್ ಬಂದರನ್ನು ಅಭಿವೃದ್ಧಿ ಪಡಿಸಲು - ಸರ್ಕಾರದ ಆದೇಶ ಸಂಖ್ಯೆ ಐ.ಡಿ.ಡಿ 68 ಪಿಎಸ್.ಪಿ 2022(ಇ746686) **ದಿನಾಂಕ: 08.04.2022ರಲ್ಲಿ ಅನುಮತಿ ನೀಡಲಾಗಿದೆ.**<br><br>ಕೇಣಿ ಬಂದರಿನ ಬಂದರು ವ್ಯಾಪ್ತಿಯನ್ನು (Limits) ಇಂಡಿಯನ್ ಪೋರ್ಟ್ ಆಕ್ಟ್ 1908 ರ ಅಡಿಯಲ್ಲಿ ಸರ್ಕಾರವು **ದಿನಾಂಕ: 11.04.2022 ರಲ್ಲಿ ಘೋಷಿಸಲಾಗಿದೆ.**<br><br>ಆಳ ಸಮುದ್ರ ಸರ್ವ ಋತು ಬಂದರನ್ನು ಸಾರ್ವಜನಿಕ ಖಾಸಗೀ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲು ಜಾಗತಿಕ ಟೆಂಡರ್‌ನ್ನು **ದಿನಾಂಕ: 12.09.2022 ರಂದು ಆಹ್ವಾನಿಸಲಾಗಿತ್ತು.**<br><br>ಮುಂದುವರೆದು ದಿನಾಂಕ: 07.03.2023ರಂದು ಎರಡನೇ ಬಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಅದರಂತೆ M/s JSW Infrastructure Limited ರವರು ಯಶಸ್ವಿ ಬಿಡ್ಡುದಾರರಾಗಿ ಹೊರಹೊಮ್ಮಿರುತ್ತಾರೆ. |

| | | |
|---|---|---|
| | | ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಖಾಸಗೀ ಸಹಭಾಗಿತ್ವವದಲ್ಲಿ ಗ್ರೀನ್ ಫೀಲ್ಡ್ ಬಂದರು ಅಭಿವೃದ್ಧಿ ಪಡಿಸಲು **ದಿನಾಂಕ: 29.11.2023 ರಂದು ರಿಯಾಯಿತಿ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.**<br><br>ಪ್ರಸ್ತುತ ಒಪ್ಪಂದಂತೆ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸಲು M/s JSW Infrastructure Limited ರವರು ಸಮುದ್ರದಲ್ಲಿ ಭೂ ಸಾಂದ್ರತೆ ಮತ್ತು ಇತರೆ ಅಧ್ಯಯನಗಳು (Geotechnical Investigation) ಪ್ರಗತಿಯಲ್ಲಿದೆ. |
| ಆ) | ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುತ್ತಿರುವ ಈ ಬಂದರ್‌ನಲ್ಲಿ ಯಾವ ಯಾವ ಖಾಸಗಿ ಕಂಪನಿಗಳು ಭಾಗಯಾಗಿವೆ ಮತ್ತು ಅವರುಗಳ ಪಾಲು ಎಷ್ಟು; | M/s JSW Keni Port Private limited ಕಂಪನಿಯು ರಿಯಾಯಿತಿದಾರರಾಗಿ ಆಯ್ಕೆಯಾದ ಖಾಸಗಿ ಕಂಪನಿಯಾಗಿದೆ. ಈ ಕಂಪನಿಯು M/s JSW Infrastructure Limited ಮತ್ತು M/s. JSW Dharamtar Port Private Limited ನಡುವಿನ ಒಕ್ಕೂಟವಾಗಿದ್ದು, M/s JSW Infrastructure Limited 74% ಷೇರುಗಳನ್ನು ಮತ್ತು M/s. JSW Dharamtar Port Private Limited 26% ಷೇರುಗಳನ್ನು ಹೊಂದಿದೆ. |
| ಇ) | ಈ ಕಾಮಗಾರಿಗಾಗಿ ರಾಜ್ಯ ಸರ್ಕಾರದ ವತಿಯಿಂದ ಇಲ್ಲಿಯವರೆಗೆ ಎಷ್ಟು ಮೊತ್ತವನ್ನು ಬಿಡುಗಡೆಗೊಳಿಸಿ ಖರ್ಚು ಮಾಡಲಾಗಿದೆ? (ಮಾಹಿತಿ ಒದಗಿಸುವುದು) | ಕೇಣಿ ಬಂದರು ಅಭಿವೃದ್ಧಿ ಕಾಮಗಾರಿಯನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿರುವುದರಿಂದ ರಾಜ್ಯ ಸರ್ಕಾರದ ವತಿಯಿಂದ ಕಾಮಗಾರಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುವುದಿಲ್ಲ. |

**IDD 31 PSP 2025**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**